ವಿಜಯವಾಣಿ
ಕನ್ನಡಿಗರ ಧ್ವನಿ

## ■ ಅಂತರ ಕಾಲೇಜು ವಿಶ್ವವಿದ್ಯಾಲಯ ಕ್ರಿಕೆಟ್

# ಜೈನ್ ವಿವಿಗೆ ಪ್ರಶಸ್ತಿ ಸಂಭ್ರಮ



ವಿಶ್ವವಿದ್ಯಾಲಯ ಕ್ರಿಕೆಟ್ ಚಾಂಪಿಯನ್ ಆದ ಜೈನ್ ತಂಡ.

**ನವದೆಹಲಿ:** ಆಲ್ರೌಂಡರ್ ಶ್ರೇಯಸ್ ಗೋಪಾಲ್ (83ರನ್, 2 ವಿಕೆಟ್) ನೀಡಿದ ಭರ್ಜರಿ ಪ್ರದರ್ಶನದ ನೆರವಿನಿಂದ ಬೆಂಗಳೂರಿನ ಜೈನ್ ವಿಶ್ವವಿದ್ಯಾಲಯ ಚೊಚ್ಚಲ ಟೊಯೋಟಾ ಅಂತರ ಕಾಲೇಜು ವಿಶ್ವವಿದ್ಯಾಲಯ ಕ್ರಿಕೆಟ್ ಟೂರ್ನಿಯ ಚಾಂಪಿಯನ್ ಆಗಿದೆ. ಭಾನುವಾರ ನವದೆಹಲಿಯಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ಆತಿಥೇಯ ಜಾಮಿಯಾ ಮಿಲಿಯಾ ಇಸ್ಲಾಮಿಯಾ ವಿವಿಯನ್ನು ರೋಚಕ 2 ರನ್‌ಗಳಿಂದ ಮಣಿಸಿ ಪ್ರಶಸ್ತಿಗೆ ಮುತ್ತಿಟ್ಟಿತು.

ಟಾಸ್ ಗೆದ್ದು ಬ್ಯಾಟಿಂಗ್ ಮಾಡಿದ ಜೈನ್ ವಿವಿ 6 ವಿಕೆಟ್‌ಗೆ 122ರನ್‌ಗಳಿಸಲಷ್ಟೇ ಶಕ್ತವಾಯಿತು. ಬಳಿಕ ಬೌಲಿಂಗ್‌ನಲ್ಲಿ ಜಾಮಿಯಾ ತಂಡವನ್ನು 7 ವಿಕೆಟ್‌ಗೆ 120ರನ್‌ಗಳಿಗೆ ನಿಯಂತ್ರಿಸಿದ ಕೌನೇನ್ ಅಬ್ಬಾಸ್ ಬಳಗ ಚೊಚ್ಚಲ ಆವೃತ್ತಿಯ ಚಾಂಪಿಯನ್ ಪಟ್ಟ ಅಲಂಕರಿಸಿತು.

ಸುಲಭ ಮೊತ್ತವನ್ನು ಬೆನ್ನಟ್ಟುವ ಗುರಿಯಲ್ಲಿ ಆಡಲಿಳಿದ ಜಾಮಿಯಾ ತಂಡಕ್ಕೆ ಆರಂಭದಲ್ಲೇ ಜೈನ್ ವಿವಿ ಬಳಗ ಪೆಟ್ಟು ನೀಡಿತು. 5 ರನ್‌ಗಳಿಸುವ ವೇಳೆಗೆ ನಾಯಕ ಪರ್ವೀನ್ ಯಾದವ್ (0) ಹಾಗೂ ಅಮಿತ್ ವರ್ಮಾರ (4) ವಿಕೆಟ್ ಉರುಳಿತ್ತು. ಆದರೆ, ಶಿವಂ ಶರ್ಮ (35) ಹಾಗೂ ಸುರಿಂದರ್ ದಹಿಯಾ (31) 3ನೇ ವಿಕೆಟ್‌ಗೆ 65 ರನ್ ಜತೆಯಾಟವಾಡಿ ತಂಡಕ್ಕೆ ಸುಲಭ ಗೆಲುವು ಕೊಡಿಸುವ ನಿರೀಕ್ಷೆಯಲ್ಲಿದ್ದರು. ಆಗ ದಾಳಿಗಿಳಿದ ಶ್ರೇಯಸ್ ಗೋಪಾಲ್ ಈ ಇಬ್ಬರನ್ನು ಬೆನ್ನುಬೆನ್ನಿಗೆ ಉರುಳಿಸುವ ಮೂಲಕ ಜೈನ್‌ಗೆ ಗೆಲುವಿನ ಕನಸುಕೊಟ್ಟರು. ಇಲ್ಲಿ ಸಿಕ್ಕ ಯಶಸ್ಸನ್ನು ಕೊನೆಯವರೆಗೂ ಉಳಿಸಿಕೊಳ್ಳುವಲ್ಲಿ ಜೈನ್ ಯಶಸ್ವಿಯಾಯಿತು. ಕೊನೆಯ ಓವರ್‌ನಲ್ಲಿ ಗೆಲುವಿಗೆ 14 ರನ್ ಅಗತ್ಯವಿತ್ತಾದರೂ ಅಂತಿಮ ಓವರ್ ಎಸೆದ ಸುಚಿತ್ ಕೇವಲ 11 ರನ್ ನೀಡಿದರು. ಶ್ರೇಯಸ್ ಗೋಪಾಲ್ 2 ವಿಕೆಟ್ ಉರುಳಿಸಿದರೆ, ಉಳಿದ ಪ್ರಮುಖ ಬೌಲರ್‌ಗಳು ಒಂದೊಂದು ವಿಕೆಟ್ ಪಡೆದರು.


ಪಂದ್ಯದ ವೇಳೆ ಹಾಜರಿದ್ದ ಸೆಹ್ವಾಗ್.

**ಹೀನಾಯ ಆರಂಭ:** ಇದಕ್ಕೂ ಮುನ್ನ ಬ್ಯಾಟಿಂಗ್ ಮಾಡಿದ ಜೈನ್ ತಂಡ ನಾಯಕ ಕೌನೇನ್ ಅಬ್ಬಾಸ್ (33) ಹಾಗೂ ಶ್ರೇಯಸ್ ಗೋಪಾಲ್ (83) 4ನೇ ವಿಕೆಟ್‌ಗೆ ಸೇರಿಸಿದ 98 ರನ್‌ಗಳ ನೆರವಿನಿಂದ ಜೈನ್ ತಂಡ 122 ರನ್‌ಗಳಿಸಲು ಯಶಸ್ವಿಯಾಯಿತು. ಇದಕ್ಕೂ ಮುನ್ನ ಖಾತೆ ತೆರೆಯುವ ಮುನ್ನವೇ ತಂಡದ ಮೂರು ವಿಕೆಟ್ ಉರುಳಿತ್ತು. ಗೋಪಾಲ್ 62 ಎಸೆತದಲ್ಲಿ 8 ಬೌಂಡರಿಗಳಿದ್ದ 83 ರನ್ ಬಾರಿಸಿ ಮಿಂಚಿದರು. ಜಾಮಿಯಾ ಪರ ಅಭಯ್ ನೇಗಿ 18 ರನ್ ನೀಡಿ 3 ವಿಕೆಟ್ ಕಿತ್ತರು. **ಜೈನ್ ವಿವಿ 6 ವಿಕೆಟ್‌ಗೆ 122** (ಶ್ರೇಯಸ್ ಗೋಪಾಲ್ 83, ಕೌನೇನ್ ಅಬ್ಬಾಸ್ 33, ಅಭಯ್ ನೇಗಿ 18ಕ್ಕೆ 3) **ಜಾಮಿಯಾ ವಿವಿ 7 ವಿಕೆಟ್‌ಗೆ 120** (ಶಿವಂ ಶರ್ಮ 35, ಸುರಿಂದರ್ ದಹಿಯಾ 31,ಶ್ರೇಯಸ್ ಗೋಪಾಲ್ 16ಕ್ಕೆ 2)